# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, 15ನೇ ಸೆಪ್ಟೆಂಬರ್ 2025**

*****

**ಸಂಖ್ಯೆ : 38**

ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಪದೋನ್ನತಿ ಹೊಂದಿದ ಶಿಕ್ಷಕರು/ಪ್ರಾಂಶುಪಾಲರುಗಳ ಹಾಗೂ ಕಾಲಮಿತಿ ಮತ್ತು ಕಾಲಬದ್ದ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರು/ಪ್ರಾಂಶುಪಾಲರ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸಲು ವಿಶೇಷ ಸದನ ಸಮಿತಿಯನ್ನು ದಿನಾಂಕ:02.09.2025ರಂದು ರಚಿಸಲಾಗಿರುತ್ತದೆ. ತತ್ಸಂಬಂಧದಲ್ಲಿ ಹೊರಡಿಸಿರುವ ಲಘು ಪ್ರಕಟಣೆ ಭಾಗ–2 (ಸಂಖ್ಯೆ:36)ರಲ್ಲಿನ ಪರಿಶೀಲನಾಂಶಗಳನ್ನು ಸಮಿತಿಯ ತೀರ್ಮಾನದ ರೀತ್ಯಾ ಈ ಕೆಳಕಂಡಂತೆ ಮಾರ್ಪಡಿಸಲಾಗಿರುತ್ತದೆ. ಶಿಕ್ಷಕರುಗಳ/ಉಪನ್ಯಾಸಕರುಗಳ ವೇತನ ತಾರತಮ್ಯ ಸಮಸ್ಯೆಯ ಪರಿಹಾರಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸಿ 3 ತಿಂಗಳ ಅವಧಿಯೊಳಗಾಗಿ ವರದಿಯನ್ನು ಸಲ್ಲಿಸುವುದು.

### ಪರಿಶೀಲನಾಂಶಗಳು

1. ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಮೇಲೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ದ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು;

2. ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರು ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಅನ್ವಯ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ದ ವೇತನ ಮುಂಬಡ್ತಿ ಪಡೆದಿರುವ ಶಿಕ್ಷಕರುಗಳ/ಮುಖ್ಯ ಶಿಕ್ಷಕರು/ಉಪನ್ಯಾಸಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು;
3. ಸರ್ಕಾರಿ ಹಾಗೂ ಅನುದಾನಿತ ಪದವಿಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲರ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10, 15, 20, 25 ಮತ್ತು 30 ವರ್ಷಗಳ ಕಾಲಮಿತಿ ಮತ್ತು ಕಾಲಬದ್ದ ವೇತನ ಮುಂಬಡ್ತಿ ಪಡೆದಿರುವ ಉಪನ್ಯಾಸಕರುಗಳ ಹಾಗೂ ಪ್ರಾಂಶುಪಾಲರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು;

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ